# ಸಲ್ಮಾನ್ ಹೊಗಳಿದ ರೇವತಿ



1991ರಲ್ಲಿ 'ಲವ್' ಎಂಬ ಹಿಂದಿ ಸಿನಿಮಾ ಮೂಲಕ ನಟಿ ರೇವತಿ ಹಿಂದಿ ಚಿತ್ರರಂಗ ಪ್ರವೇಶಿಸಿದ್ದರು. ಆ ಸಿನಿಮಾದ ನಾಯಕ ಸಲ್ಮಾನ್ ಖಾನ್. 2023ರಲ್ಲಿ 'ಟೈಗರ್ 3' ಚಿತ್ರದಲ್ಲಿ ಇದೇ ರೇವತಿ ಅಭಿನಯಿಸಿದ್ದಾರೆ. ಅವರೀಗ ನಾಯಕಿಯಲ್ಲ, ಆದರೆ ಸಲ್ಮಾನ್ ಈಗಲೂ ನಾಯಕ. 2004ರಲ್ಲಿ ರೇವತಿ 'ಫಿರ್ ಮಿಲೇಂಗೆ' ಎನ್ನುವ ಹಿಂದಿ ಚಿತ್ರವೊಂದನ್ನು ನಿರ್ದೇಶಿಸಿದ್ದರು. ಅದರಲ್ಲೂ ಸಲ್ಮಾನ್ ನಾಯಕ. ಬದಲಾದ ಕಾಲಘಟ್ಟದಲ್ಲಿ ಈ ನಟನೊಟ್ಟಿಗೆ ರೇವತಿ ಪದೇಪದೇ ಮುಖಾಮುಖಿಯಾಗಿದ್ದಾರೆ. ಕೆಲವೊಮ್ಮೆ ವರ್ಷಗಳ ನಂತರ ಮೆಸೇಜ್ ಮಾಡಿರುವ ಪ್ರಸಂಗಗಳೂ ಇವೆ.

'ಸಲ್ಮಾನ್ ಖಾನ್ ಸ್ನೇಹಜೀವಿ. ಅವರಿಗೆ ಕೊಡುವುದರಲ್ಲಿ ಖುಷಿ ಹೆಚ್ಚು. ಬಹುಕಾಲದಿಂದಲೂ ಅವರು ಸೂಪರ್‌ಸ್ಟಾರ್. ನಾನು ಸಾಮಾನ್ಯ ಮನುಷ್ಯಳಂತೆ. ಮೊದಲಿನಿಂದಲೂ ಅವರಲ್ಲಿ ನಾನು ಒಳ್ಳೆಯ ಮನುಷ್ಯನನ್ನು ನೋಡುತ್ತಾ ಬಂದಿರುವೆ. ಅವರ ಸಿನಿಮಾ ನೋಡಿದಾಗ ಇಷ್ಟವಾದರೆ ಮೆಸೇಜ್ ಕಳಿಸುತ್ತಿದ್ದೆ. ಕೆಲವು ಸಲ ನಾಲ್ಕೈದು ವರ್ಷಗಳ ನಂತರ ಅವರಿಗೆ ಮೆಸೇಜ್ ಮಾಡಿದ್ದೂ ಇದೆ. ಅವಕ್ಕೆಲ್ಲ ಚಾಚೂತಪ್ಪದೆ ಅವರು ಉತ್ತರ ಕೊಡುತ್ತಾರೆನ್ನುವುದು ಖುಷಿ' ಎಂದು ರೇವತಿ ಸಲ್ಮಾನ್ ಖಾನ್ ಅವರನ್ನು ಹೊಗಳಿದ್ದಾರೆ.

'ಟೈಗರ್ 3' ಸಿನಿಮಾ ನವೆಂಬರ್ 12ರಂದು ತೆರೆಕಾಣಲಿದ್ದು, ಪ್ರಚಾರದ ಭರಾಟೆ ಅದಾಗಲೇ ಶುರುವಾಗಿದೆ. ಕತ್ರಿನಾ ಕೈಫ್, ಇಮ್ರಾನ್ ಹಶ್ಮಿ, ರಿದ್ಧಿ



ಡೋಗ್ರಾ, ಕುಮುದ್ ಮಿಶ್ರಾ ತಾರಾಗಣದಲ್ಲಿರುವ ಈ ಸಿನಿಮಾವನ್ನು ಮನೀಶ್ ಶರ್ಮ ನಿರ್ದೇಶಿಸಿದ್ದಾರೆ. ಶ್ರೀಧರ್ ರಾಘವನ್ ಚಿತ್ರಕಥೆ ಇದ್ದು, ಹಾಡುಗಳಿಗೆ ಪ್ರೀತಂ ಸ್ವರ ಸಂಯೋಜನೆ ಮಾಡಿದ್ದಾರೆ. ಯಶ್ ರಾಜ್ ಬ್ಯಾನರ್‌ನ ಈ ಸಿನಿಮಾ ಮೇಲೆ ಬಹಳಷ್ಟು ನಿರೀಕ್ಷೆಗಳಿವೆ. ಶಾರುಖ್ ಖಾನ್ ಅತಿಥಿ ಪಾತ್ರದಲ್ಲಿ ಬರಲಿರುವ ಈ ಸಿನಿಮಾದ ಮೊದಲ ಎರಡು ಭಾಗಗಳು ('ಟೈಗರ್', 'ಟೈಗರ್ ಜಿಂದಾ ಹೈ') ಬಾಕ್ಸ್‌ಆಫೀಸ್‌ನಲ್ಲಿ ಉತ್ತಮ ಗಳಿಕೆ ಮಾಡಿದ್ದವು. ತಮಿಳು, ತೆಲುಗು ಭಾಷೆಗಳಲ್ಲೂ ಏಕಕಾಲದಲ್ಲಿ ಈ ಸಿನಿಮಾ ತೆರೆಕಾಣಲಿದೆ.

# ಬಂದರು ಲೇಡಿ ಸಿಂಗಂ



ಹಣೆಯಿಂದ ಒಸರುವ ರಕ್ತ. ತೋಳುಗಳಿಗೂ ಮೆತ್ತಿದ ರಕ್ತದ ಕಲೆ. ಕಣ್ಣಲ್ಲಿ ಆಕ್ರೋಶದ ಮಡುವು. ಬಿಗಿಯಾಗಿ ಹಿಡಿದ ಒಂದು ಕೈಯಲ್ಲಿ ಗನ್. ಇನ್ನೊಂದು ಕೈಯಲ್ಲಿ ಒಬ್ಬನ ಜುಟ್ಟು. ಗನ್‌ನ ನಳಿಕೆ ಆತನ ಬಾಯೊಳಗೆ—ಇಂಥದೊಂದು ಪೋಸ್ಟರ್ ಈಗ ಚರ್ಚೆಗೆ ಇಂಬುಗೊಟ್ಟಿದೆ. ಆ ಪೋಸ್ಟರ್‌ನಲ್ಲಿ ಪೊಲೀಸ್ ವೇಷದಲ್ಲಿ ಗನ್ ಹಿಡಿದವರು ನಟನಲ್ಲ, ನಟಿ; ದೀಪಿಕಾ ಪಡುಕೋಣೆ.

ಅವರನ್ನು ರೋಹಿತ್ ಶೆಟ್ಟಿ 'ಸಿಂಗಂ 3'ನಲ್ಲಿ ಲೇಡಿ ಸಿಂಗಂ ಮಾಡಲು ಹೊರಟಿದ್ದಾರೆ. 'ನಾರಿ ಸೀತೆಯ ರೂಪವೂ ಹೌದು, ದುರ್ಗಿಯ ರೂಪವೂ ಹೌದು. ಕಾಪ್ ಯೂನಿವರ್ಸ್‌ನ ಮಹಾಕ್ರೂರಿ ಲೇಡಿ ಪೊಲೀಸ್ ಆಫೀಸರನ್ನು ಭೇಟಿ ಮಾಡಿ... ಅವರೇ ಶಕ್ತಿ ಶೆಟ್ಟಿ... ನಮ್ಮ ಲೇಡಿ ಸಿಂಗಂ' ಎಂದು ರೋಹಿತ್ ಶೆಟ್ಟಿ ಒಕ್ಕಣೆ ಬರೆದು, ಪೋಸ್ಟರ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ತೇಲಿಬಿಟ್ಟರು.'ಆಲಿ ರೇ ಆಲಿ... ಲೇಡಿ ಸಿಂಗಂ ಆಲಿ' ಎಂದು ರಣವೀರ್ ಸಿಂಗ್ ತಮ್ಮ ಪೋಸ್ಟ್‌ನಲ್ಲಿ ಫೋಟೊ ಶೇರ್ ಮಾಡಿ ಬರೆದುಕೊಂಡಿದ್ದಾರೆ.

ಅಜಯ್ ದೇವಗನ್ ಕೂಡ 'ಸಿಂಗಂ 3' ಚಿತ್ರದಲ್ಲಿ ಅಭಿನಯಿಸಲಿದ್ದು, ಲೇಡಿ ಕಾಪ್ ಪರಿಚಯದಿಂದ ಇನ್ನೊಂದು ಆಯಾಮವನ್ನು ದಕ್ಕಿಸಿಕೊಡಲು ದೀಪಿಕಾ ಅವರನ್ನು ರೋಹಿತ್ ಶೆಟ್ಟಿ ಕರೆತಂದಿದ್ದಾರೆ. ಅತಿಥಿ ಪಾತ್ರದಲ್ಲಿ ರಣವೀರ್ ಸಿಂಗ್ ಕೂಡ ನಟಿಸಲಿದ್ದಾರೆ. ಮುಂದಿನ ವರ್ಷ ಚಿತ್ರೀಕರಣ ಪ್ರಾರಂಭವಾಗಲಿದೆ. ತಮಿಳಿನ 'ಸಿಂಗಂ' ಸಿನಿಮಾದ ರೀಮೇಕ್ ಮಾಡಿದ ನಂತರ ರೋಹಿತ್ ಶೆಟ್ಟಿ ಅದೇ ಧಾಟಿಯ ಸರಣಿ ಚಿತ್ರಗಳನ್ನು ನಿರ್ದೇಶಿಸುತ್ತಾ ಬಂದಿದ್ದಾರೆ. ಇಂತಹ ಚಿತ್ರಗಳು ನೋಡುಗರಿಗೆ ಇಷ್ಟವಾಗುತ್ತವೆ. ಸಾಹಸ ದೃಶ್ಯಗಳಲ್ಲಿ ದೀಪಿಕಾ ಮಿಂಚಲಿದ್ದಾರೆ ಎನ್ನುವ ವಿಶ್ವಾಸ ಅವರದ್ದು.